



# ನರಿಯ ಬದಲಾದ ಬದುಕು

■ ಅಶೋಕ ವಿ ಬಳ್ಳಾ
ಸೂಳೇಬಾವಿ

ಅದೊಂದು ಕಾಡಿನಲ್ಲಿ ನರಿಯಿತ್ತು. ತಲೆತಲಾಂತರದಿಂದ ತಂತ್ರಗಾರಿಕೆಯಿಂದಲೇ ಬದುಕು ಸಾಗಿಸಿದ್ದ ಅದನ್ನು ಎಲ್ಲ ಜೀವಿಗಳೂ ಕುತಂತ್ರಿ, ಸಮಯಸಾಧಕ, ಮೋಸಗಾರ ಎಂದು ಜರಿಯುತ್ತಿರುವುದನ್ನು ಕೇಳಿ ಕೇಳಿ ಅದಕ್ಕೆ ಸಾಕಾಗಿ ಹೋಗಿತ್ತು. ಹೊಟ್ಟೆಪಾಡಿಗೆ ತನ್ನ ಬೌದ್ಧಿಕ ಕುಶಲತೆಯನ್ನು ಪ್ರದರ್ಶಿಸಿ ಆಹಾರ ಪಡೆಯುವಲ್ಲಿ, ಅವಕಾಶ ಗಿಟ್ಟಿಸುವಲ್ಲಿ, ಅಪಾಯದಿಂದ ಪಾರಾಗುವಲ್ಲಿ ಇತರ ಜೀವಿಗಳಿಗಿಂತ ಅದು ಮುಂದೆ ಇತ್ತು. ದೈಹಿಕವಾಗಿ ದುರ್ಬಲನಾಗಿದ್ದರಿಂದ ಈ ತಂತ್ರಗಾರಿಕೆ ಅದಕ್ಕೆ ಅನಿವಾರ್ಯವೆಂದು ತಿಳಿದಿತ್ತು.

ಒಂದು ದಿನ ಪ್ರಾಣಿಗಳೆಲ್ಲ ಸಭೆ ಸೇರಿ ಚರ್ಚಿಸಿ ಒಂದು ತೀರ್ಮಾನಕ್ಕೆ ಬಂದವು. ನರಿ ತನ್ನ ಗುಣ ಸ್ವಭಾವಗಳನ್ನು ಬದಲಿಸಿಕೊಂಡು ಎಲ್ಲರೊಂದಿಗೂ ಸಹಬಾಳ್ವೆ ನಡೆಸಬೇಕು. ಕಪಟತನ, ವಂಚನೆ, ಇನ್ನೊಬ್ಬರನ್ನು ಬಲಿಪಶು ಮಾಡುವುದನ್ನು ಹಾಗೂ ಸ್ವಾರ್ಥ ಮನೋಭಾವವನ್ನು ತೊರೆಯಬೇಕು. ಇಲ್ಲವಾದರೆ, ಯಾವ ಪ್ರಾಣಿಗಳು ಅದರೊಂದಿಗೆ ಮಾತನಾಡುವುದಾಗಲಿ, ಗೆಳೆತನ ಮುಂದುವರೆಸುವುದಾಗಲಿ ಮಾಡಬಾರದು ಎಂಬುದು ಅವುಗಳ ನಿರ್ಧಾರವಾಗಿತ್ತು. ನರಿಯನ್ನು ಕರೆದು ತಮ್ಮ ನಿರ್ಧಾರವನ್ನೂ ತಿಳಿಸಿದವು.

ತನ್ನ ಸಹಚರರ ಈ ನಿರ್ಧಾರ ಕೇಳಿ ನರಿಯು, ಒಂಟಿಯಾಗಿ ಬದುಕು ಸಾಗಿಸುವುದಕ್ಕಿಂತ ಒಂದಿತ್ತು ಒಂದಿಲ್ಲ ಎಂದುಕೊಂಡು ಗುಂಪಿನಲ್ಲಿ ವಾಸಿಸುತ್ತ ಸಂತೋಷವಾಗಿರಬೇಕೆಂದು ಬದಲಾಗಲು ತೀರ್ಮಾನಿಸಿತು. ಆದರೆ, ಅದರ ಜೀವದ ಗೆಳೆಯ ತೋಳ ನರಿಯ ತೀರ್ಮಾನವನ್ನು ಒಪ್ಪಲಿಲ್ಲ. ನನ್ನ ಬದುಕು ನನ್ನ ಸ್ವಾತಂತ್ರ್ಯ. ಇತರರಿಗಾಗಿ ನಾವು ಬದಲಾಗುವುದಕ್ಕಿಂತ ನಮಗಾಗಿ ನಾವು ಬದಲಾಗಬೇಕು. ನಮ್ಮ ಬದುಕಿನ ರೀತಿಯನ್ನು ಇನ್ನೊಬ್ಬರು ಒಪ್ಪುವುದಿಲ್ಲವೆಂದು ಬದಲಾಯಿಸಿಕೊಳ್ಳುವುದು ಮೂರ್ಖತನ ಮತ್ತು ಅಪಾಯಕ್ಕೆ ಆಹ್ವಾನ ನೀಡಿದಂತೆ ಎಂದು ಎಚ್ಚರಿಸಿತು. ಆದರೆ, ನರಿ ತನ್ನ ನಿರ್ಧಾರಕ್ಕೆ ಜೋತು ಬಿದ್ದಿತು.

ಕೆಲವು ದಿನಗಳಲ್ಲಿ ನರಿಯು ತನ್ನ ಬದಲಾದ ಬದುಕಿನಿಂದ ಕೃಶವಾಯಿತು. ಹೊಟ್ಟೆ ತುಂಬುವಷ್ಟು ಆಹಾರ ಅದಕ್ಕೆ ದಕ್ಕಲಿಲ್ಲ. ತಂತ್ರಗಾರಿಕೆ ಕೈ ಬಿಟ್ಟಿದ್ದಕ್ಕಾಗಿ ರಾಜಕೀಯ ಸ್ಥಾನಮಾನವನ್ನು ಕಳೆದುಕೊಂಡಿತು. ತಾನು ತನ್ನ ಸಹಚರರ ಅಪೇಕ್ಷೆಯಂತೆ ಬದಲಾದರೂ ನಿರೀಕ್ಷಿತ ಗೌರವ, ಸಹಾಯಸಹಕಾರ ಸಿಗಲಿಲ್ಲ. ಬದಲಾಗಿ ಬಲಿಷ್ಠ ಪ್ರಾಣಿಗಳು ಅದರ ಮೇಲೆ ದಾಳಿ ಮಾಡಲು ಪ್ರಾರಂಭಿಸಿದವು. ಕಾಡಿನ ಬದುಕು ಕಿರಿಕಿರಿಯೆನಿಸಿತು. ಮನುಷ್ಯರು ಬೆಳಿಗ್ಗೆ ತನ್ನ ಮುಖ ನೋಡಿದರೆ ಅದೃಷ್ಟ ಖುಲಾಯಿಸುತ್ತದೆ ಎಂಬ ನಂಬಿಕೆ ಇಟ್ಟುಕೊಂಡಿದ್ದಾರೆ. ಅವರಿಗೆ ಪ್ರತಿದಿನವೂ ದರ್ಶನ ನೀಡುತ್ತಾ ತನ್ನ ಉಳಿದ ಜೀವನವನ್ನಾದರೂ ಪರೋಪಕಾರ ಮಾಡುತ್ತ ಕಳೆಯಬೇಕೆಂದು ಕಾಡನ್ನು ತೊರೆದು ನಾಡಿನ ದಾರಿ ಹಿಡಿಯಿತು.

ಆ ದಿನ ಬೆಳಗಿನ ಜಾವ ಗ್ರಾಮವೊಂದರ ಹತ್ತಿರ ಕಾಣಿಸಿಕೊಂಡ ನರಿಯನ್ನು ಅಲ್ಲಿನ ಜನ ತಮ್ಮ ಬೆಳೆ ಹಾಳುಮಾಡಲು, ಕುರಿಮರಿ ಕೋಳಿಗಳನ್ನು ತಿನ್ನಲು ಬಂದಿದೆಯೆಂದೂ ಭಾವಿಸಿ ಕೋಲುಬಡಿಗೆಗಳನ್ನು ಹಿಡಿದು ಬೆನ್ನುಹತ್ತಿದರು. ಅವರ ಹೊಡೆತ ತಿನ್ನುವ ಮುನ್ನ ಎದ್ದೆನೋ ಬಿದ್ದೆನೋ ಎನ್ನುತ್ತ ತಪ್ಪಿಸಿಕೊಂಡು ತನ್ನ ಮೂಲ ಸ್ಥಳಕ್ಕೆ ಬಂದಿತು. ಅದೇ ಸಮಯಕ್ಕೆ ಸರಿಯಾಗಿ ಪ್ರಾಣಸ್ನೇಹಿತ ತೋಳ ಎದುರಾಯಿತು. ನರಿಯ ಪರಿಸ್ಥಿತಿ ಕಂಡು ಮರುಗಿತು.

ನರಿಯು ತನ್ನ ತಪ್ಪು ನಿರ್ಧಾರದಿಂದಾದ ಅನಾಹುತಗಳನ್ನು ನೆನೆದು ಕಣ್ಣೀರಾಯಿತು. ಇನ್ನೊಬ್ಬರಿಗಾಗಿ ಬದಲಾಗದೇ ತನಗಾಗಿ ತಾನು ಮೊದಲಿನಂತಾಗುವ ನಿರ್ಧಾರ ಮಾಡಿತು. ಅದರಂತೆ ಬದುಕಿ ಮೊದಲಿನ ಎಲ್ಲ ಸ್ಥಾನಮಾನ ಮತ್ತು ಬದುಕನ್ನು ಪಡೆಯಿತು. ಸ್ವಾಭಾವಿಕ ಜೀವನ ಶೈಲಿ ಮತ್ತು ತಂತ್ರಗಾರಿಕೆ ನಮ್ಮ ಯಶಸ್ವಿ ಬದುಕಿನ ಗುಟ್ಟು. ಅದನ್ನು ಯಾವತ್ತು ಬಿಟ್ಟು ಕೊಡಬಾರದು ಎಂಬ ಸಂದೇಶವನ್ನು ತನ್ನ ಇಡೀ ಕುಲಕ್ಕೆ ಸಾರಿತು.■

